# ರಾಷ್ಟ್ರೀಯ ಚಳವಳಿಯಲ್ಲಿ ಡಾ. ಎಚ್. ನರಸಿಂಹಯ್ಯನವರ ಪಾತ್ರ

**ರಾಘವೇಂದ್ರ ಜಿ.ಎನ್.**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ. ದಾಸರಹಳ್ಳಿ, ಬೆಂಗಳೂರು.

DOI: https://doi.org/10.5281/zenodo.17411465

## ABSTRACT:

ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಕನ್ನಡಿಗರ ಪಾತ್ರ ಅಮೂಲ್ಯವಾದದ್ದು ಮತ್ತು ಅನನ್ಯವಾದದ್ದು. ಈ ದಿಕ್ಕಿನಲ್ಲಿ ಗುರುತಿಸಬಹುದಾದ ಹಲವಾರು ಕನ್ನಡಿಗರು ಅಜರಾಮರರಾಗಿದ್ದಾರೆ. ಅಂತಹವರಲ್ಲಿ ಒಬ್ಬರು ಡಾ. ಹೊಸೂರು ನರಸಿಂಹಯ್ಯನವರು. ಸಮಾಜ ಸೇವಕರು, ಗಾಂಧಿವಾದಿ, ಸರಳಜೀವಿ, ಮಾನವತಾವಾದಿ, ವಿಚಾರವಾದಿ, ಅಧ್ಯಾಪಕರು, ಶಿಕ್ಷಣ ತಜ್ಞರು, ಕರ್ಮಯೋಗಿ, ವಿಜ್ಞಾನ ಕ್ಷೇತ್ರದಲ್ಲಿ ಗಣನೀಯ ಕೊಡುಗೆಯನ್ನು ನೀಡಿದವರು, ಇವೆಲ್ಲಕ್ಕೂ ಮಿಗಿಲಾಗಿ ತಮ್ಮ ಯೌವನದ ಸಂದರ್ಭದಲ್ಲಿ ಸ್ವಾತಂತ್ರ್ಯದ ದೀವಿಗೆ ಪ್ರಜ್ವಲಿಸಲು ತಮ್ಮ ಅಮೂಲ್ಯವಾದ ಜೀವನವನ್ನು ಮುಡುಪಾಗಿಟ್ಟವರು. ಕ್ವಿಟ್ ಇಂಡಿಯಾ ಚಳುವಳಿ ಹಾಗೂ ಮೈಸೂರು ಚಲೋ ಚಳುವಳಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಾಡಿನ ಬಿಡುಗಡೆಗಾಗಿ ದುಡಿದವರು. ನರಸಿಂಹಯ್ಯನವರು ಪ್ರಜಾಪ್ರಭುತ್ವದ ಮೌಲ್ಯಗಳು ಬೆಳೆಯಲು ತಮ್ಮ ಅಮೂಲ್ಯವಾದ ಜೀವನವನ್ನು ಸವಿಸಿದವರು. ಗಾಂಧೀವಾದಿಯಾಗಿ, ಸರಳ ಸಜ್ಜನಿಕೆಯ ಜೀವನವನ್ನು ಸಮಾಜಕ್ಕೆ ಸಂದೇಶವಾಗಿ ನೀಡಿದವರು. ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ದುಡಿದು, ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದವರು. ಗೌರಿಬಿದನೂರು, ಬಾಗೇಪಲ್ಲಿ, ಬೆಂಗಳೂರು ಮತ್ತು ತಮ್ಮ ಹುಟ್ಟೂರು ಹೊಸೂರಿನಲ್ಲಿ ಶಿಕ್ಷಣ ಸಂಸ್ಥೆಗಳು ಬೆಳೆಯಲು ಕಾರಣಕರ್ತರು. ಬಡ ಕುಟುಂಬದಲ್ಲಿ ಹುಟ್ಟಿ ಅನೇಕ ಕಷ್ಟಗಳನ್ನು ಎದುರಿಸಿ ಅಧ್ಯಯನಶೀಲತೆಯನ್ನು ಬೆಳೆಸಿಕೊಂಡು, ದೇಶಭಕ್ತರಾಗಿ ರಾಷ್ಟ್ರೀಯ ಹೋರಾಟದ ಹಾದಿಯಲ್ಲಿ ನಡೆದು, ಸ್ವಾತಂತ್ರ್ಯಾನಂತರ ಕುಲಪತಿಗಳಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಒಂದು ಹೊಸ ದೆಸೆಯನ್ನು ಕೊಟ್ಟವರು ಇವರೇ. ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿ ವೈಜ್ಞಾನಿಕ ವಿಚಾರಗಳನ್ನು ಶಾಸನಸಭೆಯಲ್ಲಿ ಚರ್ಚಿಸಿ, ಅವುಗಳ ಅನುಷ್ಠಾನಕ್ಕಾಗಿ ದುಡಿದರು.

## KEYWORDS:

ರಾಷ್ಟ್ರೀಯ ಚಳವಳಿ, ಡಾ. ಎಚ್. ನರಸಿಂಹಯ್ಯ, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿ, ಗಾಂಧೀವಾದಿ.

### ಡಾ. ಎಚ್. ನರಸಿಂಹಯ್ಯನವರ ಆರಂಭಿಕ ಜೀವನ:

ಡಾ. ಎಚ್. ನರಸಿಂಹಯ್ಯನವರು 1920, ಜೂನ್ 06ರಂದು, ಚಿಕ್ಕಬಳ್ಳಾಪುರ ಜಿಲ್ಲೆಯ (ಹಿಂದಿನ ಕೋಲಾರ ಜಿಲ್ಲೆ) ಗೌರಿಬಿದನೂರು ತಾಲೂಕಿನ ಹೊಸೂರು ಎಂಬ ಹಳ್ಳಿಯ ಬಡ ಕುಟುಂಬವೊಂದರಲ್ಲಿ ಜನಿಸಿದರು. ಶಿಕ್ಷಕರ ಮೂಲಕ ಮಹಾತ್ಮ ಗಾಂಧೀಜಿಯವರ ಬಗ್ಗೆ ಕೇಳಿ ತಿಳಿದು ಪ್ರಭಾವಿತರಾಗಿದ್ದ ನರಸಿಂಹಯ್ಯನವರು ತಮ್ಮ ಹನ್ನೆರಡನೆ ವಯಸ್ಸಲ್ಲೇ ಚರಕದಲ್ಲಿ ನೂಲು ತೆಗೆಯಲು ಆರಂಭ ಮಾಡಿದರು. ಅವರ ತಾಯಿಯವರು ನೂಲುತಿದ್ದುದು ಅವರಿಗೆ ಮತ್ತಷ್ಟು ಸ್ಫೂರ್ತಿ ನೀಡಿತು. ಅವರು ತಮ್ಮ ಜೀವನಪೂರ್ತಿ ಖಾದಿಧಾರಿಯಾಗಿದ್ದರು. ಅವರ ಊರಾದ ಹೊಸೂರಿನಲ್ಲಿ ಒಂದು ಖಾದಿ ಕೇಂದ್ರವು ಸಹ ಇದ್ದು ಸಾಕಷ್ಟು ಜನರಿಗೆ ಉದ್ಯೋಗ ಅಲ್ಲಿ ಸಿಕ್ಕಿತು. ಗಾಂಧೀಜಿಯವರ

ರಚನಾತ್ಮಕ ಕಾರ್ಯಕ್ರಮಗಳಾದ ಖಾದಿ, ಹಿಂದಿ ಬಳಕೆ, ಅಸ್ಪೃಶ್ಯತಾ ನಿವಾರಣೆ, ಪಾನನಿರೋಧದಂತಹ ಕಾರ್ಯಕ್ರಮಗಳು ಈ ಹೊಸೂರಿನಲ್ಲಿ ತಕ್ಕಮಟ್ಟಿಗೆ ನಡೆಯುತ್ತಿದ್ದವು. ಬಾಲಕ ನರಸಿಂಹಯ್ಯ ಪ್ರತಿನಿತ್ಯ ಸಂಜೆ ಹೆಂಡದ ಅಂಗಡಿ ಮುಂದೆ ನಿಂತು ಪಿಕೆಟಿಂಗ್ ಮಾಡುತ್ತಿದ್ದವರ ಜೊತೆ ಸೇರಿ ತಾವೂ ಹೋರಾಟದಲ್ಲಿ ಭಾಗವಹಿಸಿದರು.

**ಮಹಾತ್ಮ ಗಾಂಧೀಜಿಯವರ ಭೇಟಿ ಮತ್ತು ಪ್ರಭಾವ:**

1936ರಲ್ಲಿ ಗಾಂಧೀಜಿಯವರು ತಮ್ಮ ಆರೋಗ್ಯ ಸುಧಾರಣೆಗೆ ಚಿಕ್ಕಬಳ್ಳಾಪುರ ಬಳಿಯ ನಂದಿ ಬೆಟ್ಟದಲ್ಲಿ ತಂಗಿದ್ದಾಗ, ನರಸಿಂಹಯ್ಯ ತಮ್ಮ ಗುರುಗಳಾದ ಎಂ.ಎಸ್. ನಾರಾಯಣರಾವ್ ಮತ್ತು ವೆಂಕಟಾಚಲಯ್ಯನವರ ಜೊತೆಯಲ್ಲಿ ಹೋಗಿ ಮಹಾತ್ಮರನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ಆ ಚಿಕ್ಕ ಬಾಲಕನ ಮೇಲೆ ಗಾಂಧೀಜಿಯವರ ದರ್ಶನವು ಹೆಚ್ಚೇನೂ ಪ್ರಭಾವ ಬೀರಲಿಲ್ಲ. 1917ರಲ್ಲಿ ಡಾ. ಅನಿಬೆಸೆಂಟರು ಸ್ಥಾಪಿಸಿದ ಶಿಕ್ಷಣ ಪ್ರತಿಷ್ಠಾನದಿಂದ ಆರಂಭವಾದ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ತಮ್ಮ ಹೈಸ್ಕೂಲ್ ಶಿಕ್ಷಣ ಪಡೆಯಲು ಸೇರಿದರು. 'ಗಾಂಧಿ ಸ್ಕೂಲ್' ಎಂದೇ ಕರೆಯಲಾಗುತ್ತಿದ್ದ, ಈ ಶಾಲೆಯು ಅವರ ಜೀವನದ ಮೇಲೆ ಅತ್ಯಂತ ಹೆಚ್ಚಿನ ಪ್ರಭಾವವನ್ನು ಬೀರಿತು. ಖಾದಿಟೋಪಿ, ದೇಶಾಭಿಮಾನ, ರಾಷ್ಟ್ರೀಯ ಹೋರಾಟದ ಕಿಚ್ಚನ್ನು ಬೆಳೆಸಿತು.

ನರಸಿಂಹಯ್ಯನವರು 9ನೇ ತರಗತಿಯಲ್ಲಿದ್ದಾಗ 1936, ಜೂನ್ 11ರಂದು ಬೆಂಗಳೂರಿನ ಕುಮಾರ ಪಾರ್ಕ್ ನಲ್ಲಿ ತಮ್ಮ ಶಿಕ್ಷಕರು ಮತ್ತು ಸಹಪಾಠಿಗಳೊಂದಿಗೆ ಗಾಂಧೀಜಿಯವರನ್ನು ಭೇಟಿಯಾದರು. ಗಾಂಧೀಜಿ ಅವರ ಜೊತೆಗೆ ಅವರ ಆಪ್ತಕಾರ್ಯದರ್ಶಿ ಮಹದೇವ ದೇಸಾಯಿ, ಸರ್ದಾರ್ ಪಟೇಲ್, ಕರ್ನಾಟಕದ ಸದಾಶಿವರಾಯರು ಇದ್ದರು. ಬಾಲಕ ನರಸಿಂಹಯ್ಯನ ಭುಜದ ಮೇಲೆ ಕೈ ಹಾಕಿದ ಗಾಂಧೀಜಿಯವರು ಹಿಂದಿಯಲ್ಲಿ ಮಾತನಾಡಿಸಿದರು. ಆ ಎರಡು ನಿಮಿಷಗಳ ಭೇಟಿಯನ್ನು ಅವರು ಆಶ್ಚರ್ಯ ಮತ್ತು ಅಪೂರ್ವಕರವಾದ ಪ್ರಭಾವ ಬೀರಿದ ಘಟನೆ ಎಂದು ಹೇಳಿಕೊಂಡಿದ್ದಾರೆ. ಅಂದಿನ ಹಿಂದೂ ಪತ್ರಿಕೆ ಈ ಫೋಟೋವನ್ನು ಕೂಡ ಪ್ರಕಟಿಸಿತು.

ಡಾ. ಎಚ್. ನರಸಿಂಹಯ್ಯನವರು ಇಂಟರ್ ಮೀಡಿಯಟ್ ನಲ್ಲಿ ಇದ್ದಾಗ, ಮಹಾತ್ಮಗಾಂಧಿ, ಜವಾಹರಲಾಲ್ ನೆಹರು, ವಲ್ಲಭಭಾಯಿ ಪಟೇಲ್, ಸುಭಾಸ್ ಚಂದ್ರಬೋಸ್‌ರವರ ಹೋರಾಟ, ಭಾಷಣಗಳಿಂದ ಸ್ಫೂರ್ತಿಯನ್ನು ಪಡೆದರು. ರಾಮಕೃಷ್ಣ ಆಶ್ರಮದ ನಿಕಟ ಸಂಪರ್ಕದಿಂದ ಅವರಲ್ಲಿ ಸೇವಾ ಮನೋಭಾವ, ಸಾಮಾಜಿಕ ಕಳಕಳಿ, ಆದರ್ಶಜೀವನ ಹಾಗೂ ಆತ್ಮವಿಶ್ವಾಸ ಮತ್ತಷ್ಟು ಬೆಳೆದವು. ಬೆಂಗಳೂರಿನಲ್ಲಿ ನಡೆಯುತ್ತಿದ್ದ ಪ್ರತಿನಿತ್ಯದ ಚಳುವಳಿಗಳು, ಪ್ರತಿಬಂಧಕಾಜ್ಞೆ, ಹೋರಾಟಗಾರರ ದಸ್ತಗಿರಿಗಳಿಂದ ಅವರು ಪ್ರಭಾವಿತರಾದರು. ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಬಿ.ಎಸ್ಸಿ. ಪದವಿ ಮಾಡುವಾಗ ದೈನಂದಿನ ಪತ್ರಿಕೆಗಳಾದ ತಾಯಿನಾಡು, ವಿಶ್ವ ಕರ್ನಾಟಕ, ಮದ್ರಾಸಿನ ಹಿಂದೂ, ಹರಿಜನ ವಾರಪತ್ರಿಕೆ ಇವುಗಳನ್ನು ಓದಿ ಸಾಕಷ್ಟು ಉತ್ತೇಜಿತರಾದರು. ಬಡತನ, ಅಧ್ಯಯನದ ಅವಶ್ಯಕತೆ ಒಂದು ಕಡೆಯಾದರೆ ಇನ್ನೊಂದು ಕಡೆ ಹೋರಾಟದ ಸೆಳೆತ ಅವರಲ್ಲಿ ಉಂಟಾಯಿತು.

**ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ನರಸಿಂಹಯ್ಯನವರ ಪಾತ್ರ:**

1942ರ ಕ್ವಿಟ್ ಇಂಡಿಯಾ ಚಳುವಳಿ ಆರಂಭವಾಗಿ, ಗಾಂಧೀಜಿಯವರು "ಮಾಡು ಇಲ್ಲವೇ ಮಡಿ" ಎಂದು ಸಂದೇಶವನ್ನು ನೀಡಿದರು. ಆಗಸ್ಟ್ 17ರಂದು ನರಸಿಂಹಯ್ಯನವರು ಆರ್ಯ ಸಮಾಜದಲ್ಲಿದ್ದ ತಮ್ಮ ಸ್ನೇಹಿತರ ಜೊತೆ ಸೇರಿಕೊಂಡು ಒಂದು ಸಭೆಯನ್ನು

ನಡೆಸಲು ತೀರ್ಮಾನಿಸಿದರು. ಪೋಲೀಸರಿಗೆ ಕ್ಷಮಾಪಣಾ ಪತ್ರ ಬರೆದುಕೊಡಲು ನಿರಾಕರಿಸಿದ್ದರಿಂದ ಅವರನ್ನು ದಸ್ತಗಿರಿ ಮಾಡಿ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಬಂಧಿಸಲಾಯಿತು. ಅಲ್ಲಿ ಅನೇಕ ರಾಜಕೀಯ ಖೈದಿಗಳಾಗಿದ್ದ ಕಾಂಗ್ರೆಸ್ಸಿನ ಎನ್.ಸಿ. ನಾಗಯ್ಯ ರೆಡ್ಡಿ, ಕೆ.ಟಿ.ಭಾಷ್ಯಂ, ಚಂಗಲ್ ರಾಯ ರೆಡ್ಡಿ, ಟಿ. ಸಿದ್ದಲಿಂಗಯ್ಯ ಮುಂತಾದ ಗಣ್ಯರನ್ನು ಭೇಟಿಯಾದರು. ಆದರೆ ಕಾಂಗ್ರೆಸ್ ಪಕ್ಷವನ್ನು ಸೇರುವ ಸಾಹಸ ಮಾಡಲಿಲ್ಲ. ಜೈಲಿನಲ್ಲಿ ಸತ್ಯಾಗ್ರಹ ಮಾಡಿ ಲಾಠಿಚಾರ್ಜ್‌ಗೆ ಗುರಿಯಾದರು. ವಿದ್ಯಾರ್ಥಿಗಳನ್ನು ಜೈಲಿನಿಂದ ಬಿಡಿಸಲು ಅನೇಕ ಒತ್ತಡಗಳು ಬಂದ ನಂತರ ಇವರು ಕೂಡ ಹೊರಬಂದರು. 1943ರಲ್ಲಿ ಸರ್ಕಾರದ ದೌರ್ಜನ್ಯಗಳನ್ನು ಖಂಡಿಸಿ ಗಾಂಧೀಜಿಯವರು ಮತ್ತೆ ಚಳುವಳಿಗೆ ಕರೆಕೊಟ್ಟರು. ಬ್ರಿಟೀಷ್ ಸರ್ಕಾರ 144 ಸೆಕ್ಷನ್ ಪ್ರತಿಬಂಧಕಾಜ್ಞೆ ಜಾರಿ ಮಾಡಿ ಗಾಂಧೀಜಿಯವರನ್ನು ಪೂನಾದಲ್ಲಿ ಬಂಧಿಸಿತು. ತಮ್ಮ ಪರೀಕ್ಷಾ ಸಮಯ ಹತ್ತಿರ ಬರುತ್ತಿದ್ದರೂ ಅದನ್ನು ಲೆಕ್ಕಿಸದೆ ತಮ್ಮ ಸ್ನೇಹಿತರ ಜೊತೆ ಪೂನಾಗೆ ರೈಲಿನಲ್ಲಿ ತೆರಳಿ ''ಗಾಂಧೀಜಿಯವರನ್ನು ಬಿಡುಗಡೆ ಮಾಡಿ'', ''ಸರ್ಕಾರಕ್ಕೆ ಧಿಕ್ಕಾರ'' ಎಂಬ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಭಾಗವಹಿಸಿದರು. ಪೊಲೀಸರು ದಸ್ತಗಿರಿ ಮಾಡಿ ಯರವಾಡ ಜೈಲಿನಲ್ಲಿ ಇವರನ್ನು ಬಂಧಿಸಿದರು. ಗಾಂಧೀಜಿಯವರ ಎರಡನೇ ಮನೆ ಎಂದೇ ಕುಖ್ಯಾತವಾಗಿದ್ದ ಈ ಜೈಲಿನಲ್ಲಿ ಒಂದೂವರೆ ತಿಂಗಳು ಕಳೆದ ನಂತರ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಕ್ಷಮಾಪಣೆಗೆ ಒತ್ತಾಯಿಸಲಾಯಿತು. ಅದಕ್ಕೆ ಒಪ್ಪದಿದ್ದಾಗ ಮೂರು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಯಿತು. ಇಲ್ಲಿನ ಅಶುದ್ಧ ಊಟ, ಸೌಕರ್ಯಗಳ ಕೊರತೆಯಿಂದ ಅವರು ಸಾಕಷ್ಟು ನಲುಗಿದರು. ಜೊತೆಗೆ ಇವರಿಗೆ ಹೊಲಿಗೆ ಕೆಲಸವನ್ನು ಕೂಡ ನೀಡಲಾಗಿತ್ತು. ಮೂರು ತಿಂಗಳ ಕಠಿಣ ಶಿಕ್ಷೆಯನ್ನು ಅನುಭವಿಸಿದ ನಂತರ ಜೈಲಿನಿಂದ ಬಿಡುಗಡೆ ಮಾಡಲಾಯಿತು.

**ಮೈಸೂರು ಚಲೋ ಚಳುವಳಿಯಲ್ಲಿ ನರಸಿಂಹಯ್ಯನವರ ಪಾತ್ರ:**

1947ರ ಆಗಸ್ಟ್ 15ರಂದು ದೇಶ ಸ್ವಾತಂತ್ರ್ಯಗೊಂಡಾಗ ಅಷ್ಟೊತ್ತಿಗೆ ಅಧ್ಯಾಪಕರಾಗಿದ್ದ ನರಸಿಂಹಯ್ಯನವರು ಸಡಗರ ಸಂಭ್ರಮದಿಂದ ರಾಷ್ಟ್ರಧ್ವಜವನ್ನು ಹಾರಿಸಿ ರೋಮಾಂಚನಗೊಂಡರು. ಆದರೆ ಮೈಸೂರು ಸಂಸ್ಥಾನದಲ್ಲಿ ದಿವಾನರಾದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ರಾಷ್ಟ್ರಧ್ವಜವನ್ನು ಆರೋಹಣ ಮಾಡಲಿಲ್ಲ. ಇಲ್ಲಿ ಜವಾಬ್ದಾರಿ ಸರ್ಕಾರ ರಚನೆ ಆಗಲಿಲ್ಲ. ಹಾಗಾಗಿ ಮೈಸೂರು ಚಳುವಳಿ ಆರಂಭವಾಯಿತು. ಮೈಸೂರು ಕಾಂಗ್ರೆಸ್ ರಾಷ್ಟ್ರಧ್ವಜವನ್ನು ಹಾರಿಸಿ ಜವಾಬ್ದಾರಿ ಸರ್ಕಾರಕ್ಕಾಗಿ ಮೈಸೂರು ಚಲೋ ಚಳುವಳಿಯನ್ನು ಆರಂಭಿಸಿತು. ಹಿಂದಿನ ಎಲ್ಲಾ ಚಳುವಳಿಗಳಲ್ಲಿ ಭಾಗವಹಿಸಲು ವಿದ್ಯಾಭ್ಯಾಸ ಮತ್ತು ಭವಿಷ್ಯದ ಬಗ್ಗೆ ಯೋಚನೆ ಮಾಡಿದ್ದ ನರಸಿಂಹಯ್ಯನವರು ಈಗ ಅಧ್ಯಾಪಕರಾಗಿ ಆ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಕಾಲೇಜಿನ ತಮ್ಮ ಅಧ್ಯಾಪಕ ಕೆಲಸಕ್ಕೆ ಅವರು ರಾಜೀನಾಮೆ ನೀಡಿದರು. ಹಿಂದಿನಂತೆ ಪ್ರತಿಬಂಧಕಾಜ್ಞೆ ಮುರಿದು ಜೈಲಿನಲ್ಲಿ ಕೂಡುವ ಬದಲು, ರಹಸ್ಯ ಪತ್ರಿಕೆ ಆರಂಭಿಸುವ ಆಲೋಚನೆ ಮಾಡಿದರು. ಅದಕ್ಕೆ ತಮ್ಮ ಸಹೋದ್ಯೋಗಿ ಶ್ರೀನಿವಾಸ್ ಜೊತೆ ಸೇರಿ, 'ಇನ್‌ಕಿಲಾಬ್' ಎಂಬ ಹೆಸರಿನ ಪತ್ರಿಕೆಯನ್ನು ಆರಂಭಿಸಿದರು.

ಬೆಂಗಳೂರಿನ ಗುಪ್ತ ರೇಡಿಯೋ ಒಂದರಿಂದ ಬಂದ ಸುದ್ದಿಗಳು ಮತ್ತು ಇವರ ಸುತ್ತಮುತ್ತ ನಡೆಯುತ್ತಿದ್ದ ಹೋರಾಟಗಳು, ಬೆಂಗಳೂರಿನ ಪ್ರಮುಖ ಬಡಾವಣೆಗಳ ರಾಜಕೀಯ ಚಟುವಟಿಕೆಗಳು, ವ್ಯಂಗ್ಯಚಿತ್ರಗಳನ್ನು ಬರೆಯುವುದು, ವಿದ್ಯಾರ್ಥಿಗಳು ಮತ್ತು ಯುವಕರು ಮಾಡಬೇಕಾದ ಕರ್ತವ್ಯಗಳ ಬಗ್ಗೆ ಮಾರ್ಗದರ್ಶನ ನೀಡುವುದು ಹಾಗೂ ಸ್ವಾತಂತ್ರ್ಯದ ಸಂಘಗಳನ್ನು ಏರ್ಪಡಿಸಬೇಕು, ಸರ್ಕಾರಿ ನೌಕರರು ಕೆಲಸಕ್ಕೆ ಹೋಗುವುದನ್ನು

ತಡೆಯಬೇಕು, ಪಿಕೆಟಿಂಗ್ ಮಾಡಬೇಕು, ಟೆಲಿಫೋನ್ ತಂತಿ ಕತ್ತರಿಸಬೇಕು, ಶಿಸ್ತಿನಿಂದ ಕೂಡಿದ ಮೆರವಣಿಗೆಗಳನ್ನು ಮಾಡಬೇಕುಮುಂತಾದ ಸಂದೇಶಗಳನ್ನು ಇದರಲ್ಲಿ ಪ್ರಕಟಿಸಲಾಗುತ್ತಿತ್ತು.

ಚಳುವಳಿ ತೀವ್ರವಾದಾಗ ಬೆಂಗಳೂರು ಮತ್ತು ಇತರೆಡೆ ಹೋರಾಟಗಳನ್ನು ಉಗ್ರವಾಗಿ ನಿಷೇಧಿಸಲಾಯಿತು. ಇಂತಹ ವಿಷಮ ಸಮಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕರ್ನಾಟಕ ಆಂಧ್ರ ಗಡಿಗೆ ಸಮೀಪದ ಹಿಂದೂಪುರ ಸೇವಾ ಮಂದಿರದಲ್ಲಿ ಸಮಾಲೋಚನೆ ನಡೆಸಿದರು. ಈ ಸಭೆಗೆ ಒಂದು ದಿನ ತಮ್ಮ ಸ್ನೇಹಿತ ಶ್ರೀನಿವಾಸನ್ ಜೊತೆ ಭಾಗವಹಿಸಿದ್ದ ನರಸಿಂಹಯ್ಯನವರು, ಸಭೆಯಲ್ಲಿ ತತ್ವಾಧಾರಿತ ವಿಷಯಗಳು ಚರ್ಚೆಗೆ ಬಾರದ್ದರಿಂದ ಬೇಸರಗೊಂಡು ಹಿಂತಿರುಗಿದರು. ಸೆಪ್ಟೆಂಬರ್ 12ರಂದು ಮೈಸೂರು ಚಲೋ ಚಳುವಳಿ ಮುಗಿಯಿತು. ಇನ್‌ಕಿಲಾಬ್ ಪತ್ರಿಕೆ ಮೂಲಕ 31 ಸಂಚಿಕೆಗಳು ಹೊರಬಂದವಾದರೂ ಅದನ್ನು ತಡೆಯಲು ಸರ್ಕಾರದ ಎಲ್ಲ ಪ್ರಯತ್ನಗಳು ವಿಫಲವಾಗಿದ್ದವು. ಕ್ವಿಟ್ ಇಂಡಿಯಾ ಮತ್ತು ಮೈಸೂರು ಚಲೋ ಚಳುವಳಿಗಳಲ್ಲಿ ಭಾಗವಹಿಸಿದ್ದು ನರಸಿಂಹಯ್ಯನವರಿಗೆ ಅತೀವ ಸಂತೃಪ್ತಿಯನ್ನು ಮತ್ತು ಸಮಾಧಾನವನ್ನು ತಂದುಕೊಟ್ಟವು.

**ಪ್ರಶಸ್ತಿಗಳು:**

ಡಾ. ಎಚ್. ನರಸಿಂಹಯ್ಯನವರಿಗೆ ಭಾರತ ಸರ್ಕಾರವು 1972ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ನೆನಪಿನ ತಾಮ್ರ ಪತ್ರವನ್ನು ನೀಡಿ ಗೌರವಿಸಿದೆ. 1984ರಲ್ಲಿ ಭಾರತ ಸರ್ಕಾರದ ಕೊಡ ಮಾಡುವ ಪದ್ಮಭೂಷಣ ರಾಷ್ಟ್ರ ಪ್ರಶಸ್ತಿ, 1969ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 1998ರಲ್ಲಿ ನಾಡೋಜ ಪ್ರಶಸ್ತಿ, 2001ರಲ್ಲಿ ಬಸವಶ್ರೀ ಪ್ರಶಸ್ತಿ, 2002ರಲ್ಲಿ ಜವಾಹರಲಾಲ್ ನೆಹರು ರಾಷ್ಟ್ರೀಯ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹೀಗೆ ಹತ್ತು ಹಲವು ಪ್ರಶಸ್ತಿಗಳು ಅವರ ಸೇವೆಗೆ ಗರಿ ಎಂಬಂತೆ ಲಭಿಸಿವೆ. ಇವರು ತೆರೆದ ಮನ, ಹೋರಾಟದ ಹಾದಿ (ಆತ್ಮಕಥೆ), ಮೂಢನಂಬಿಕೆ, science, Non science and the paranormal (Ed.) ಎಂಬ ಕೃತಿಗಳನ್ನು ರಚಿಸುವ ಮೂಲಕ ತಮ್ಮ ಜೀವನ ಹಾಗೂ ವೈಚಾರಿಕತೆಯ ನೆಲೆಗಟ್ಟನ್ನು ಅಭಿವ್ಯಕ್ತಿಪಡಿಸಿದ್ದಾರೆ.

**ಸಮಾರೋಪ:**

ಡಾ. ಎಚ್. ನರಸಿಂಹಯ್ಯನವರು 1972ರಿಂದ 1977ರ ವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ, ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು ಆಗಿದ್ದರು, ಶಿಕ್ಷಣ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಅಮೋಘವಾದ ಸಾಧನೆಯನ್ನು ಮಾಡಿದ್ದಾರೆ. ತಮ್ಮ ಜೀವನ ಪರ್ಯಂತ ಕಾಯಕವೇ ಕೈಲಾಸ ಎಂದು ದುಡಿದು, ಸರಳತೆಯನ್ನು ಮೈಗೂಡಿಸಿಕೊಂಡ ಅಪ್ಪಟ ಕನ್ನಡಿಗ, ಆದರ್ಶ ವ್ಯಕ್ತಿ, ಸರಳ ಜೀವಿ. ಇವರು ಜನವರಿ 31, 2005ರಲ್ಲಿ ಮರಣ ಹೊಂದಿದರು. ಇತ್ತೀಚೆಗೆ ಕರ್ನಾಟಕ ಸರ್ಕಾರವು 'ಡಾ. ಎಚ್. ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ'ವನ್ನು ಸ್ಥಾಪಿಸುವ ಮೂಲಕ ಯುವ ಜನತೆಯಲ್ಲಿ ವೈಜ್ಞಾನಿಕ, ವೈಚಾರಿಕ ಚಿಂತನೆಗಳನ್ನು ಬೆಳೆಸಲು ಮುಂದಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಎಚ್. ನರಸಿಂಹಯ್ಯ, ಹೋರಾಟದ ಹಾದಿ (ಆತ್ಮಕಥೆ) ಅಭಿನವ, ವಿಜಯನಗರ, ಬೆಂಗಳೂರು, 1995
2. ಬಿ. ಗಂಗಾಧರಮೂರ್ತಿ, ಪದ್ಮಭೂಷಣ ಡಾ. ಎಚ್. ನರಸಿಂಹಯ್ಯ, ಕರ್ನಾಟಕ ವಿಧಾನಮಂಡಲ ಗ್ರಂಥಾಲಯ ಸಮಿತಿ, ವಿಧಾನಸೌಧ, ಬೆಂಗಳೂರು, 2005
3. ಅಶೋಕ ಕುಮಾರ ರಂಜೇರೆ, ಡಾ. ಎಚ್. ನರಸಿಂಹಯ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 1995
4. PARLIAMENTARY AFFAIRS AND LEGISLATION SECRETARIAT, NOTIFICA–TION NO. DPAL 30 SHASHANA 2025, BENGALURU, DATED: 07.04.2025



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.


**About the License:**


© The Authors 2024. The text of this article is open access and licensed under a Creative Commons Attribution 4.0 International License.